**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ. 27471/2014**

**ಪ್ರಾ.ಸಾ-1**

| | |
|---|---|
| **ಸಾಕ್ಷಿದಾರರ ಹೆಸರು** | **ರಂಗನಾಥ ಜಿ.** |
| **ತಂದೆಯ/ ಗಂಡನ ಹೆಸರು** | **ಗೋವಿಂದಪ್ಪ** |
| **ವಯಸ್ಸು** | **41 ವರ್ಷ** |
| **ಉದ್ಯೋಗ** | **ಎ.ಎಸ್.ಐ. ಕೆ.ಆರ್. ಪುರಂ ಪಿ.ಎಸ್.** |
| **ವಾಸ** | **ಕೆ.ಆರ್, ಪುರಂ, ಬೆಂಗಳೂರು.** |
| **ಪ್ರಮಾಣೀಕರಿಸಿದ ದಿನಾಂಕ** | **08/11/2023** |

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ**

1. ನಾನು 2016 ರಿಂದ 2021 ರವರೆಗೆ ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ಹೆಚ್.ಸಿ. 6304 ಆಗಿ ಸೇವೆ ಸಲ್ಲಿಸಿದ್ದೇನೆ. ದಿನಾಂಕ 06/03/2019 ರಂದು ಪೀಣ್ಯ ಪೊಲೀಸ್ ಠಾಣಾ ವ್ಯಾಪ್ತಿಯ ಮನಂ.144, ಶ್ರೀಕಂಠ ಸ್ವಾಮಿ ನಿಲಯ, 2 ನೇ ಮುಖ್ಯ ರಸ್ತೆ , ದೇವಿ ನಗರ, ಟಿ. ದಾಸರಹಳ್ಳಿ ಆ ವಿಳಾಸದಲ್ಲಿ ವಾಸವಿದ್ದೆ ಎಂದು ತಿಳಿಸಿದ ಆರೋಪಿ ಶ್ರೀಕಾಂತ ಬಿ.ಎಸ್. ಅಲಿಯಾಸ ಶ್ರೀಕಾಂತ ಬಿನ್. ಸ್ವಾಮಿಗೌಡ, 34 ವರ್ಷ ಅವರ ಕುರಿತು ಉದ್ಘೋಷಣೆಯನ್ನು ನ್ಯಾಯಾಲಯದ ಆದೇಶದಂತೆ ಹೊರಡಿಸಿರುತ್ತೇನೆ. ಸಮಯ ಬೆಳಿಗ್ಗೆ 11.00 ಗಂಟೆಯಿಂದ 12.00 ಗಂಟೆಯವರೆಗೆ ಉದ್ಘೋಷಣೆ ಹೊರಡಿಸಿದ ಸ್ಥಳದಲ್ಲಿ ಮಹಜರ್ ನ್ನು ಸತ್ಯರಾಜ ಮತ್ತು ಮುಬಾರಕ್ ರವರ ಸಮಕ್ಷಮ ಮಾಡಿರುತ್ತೇನೆ. ಸದರಿ ಮಹಜರ್ ನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಆ ಸ್ಥಳದಲ್ಲಿ ವಿಚಾರಿಸಲಾಗಿ, ಅಲ್ಲಿ ಸದರಿ ಆರೋಪಿ ಆ ವ್ಯಕ್ತಿ ಇಲ್ಲ ಎಂದು ತಿಳಿಸಿರುತ್ತಾರೆ.

2. ನಂತರ ನ್ಯಾಯಾಲಯದ ಆದೇಶದಂತೆ ಉದ್ಘೋಷಣೆಯ ಜರಾಕ್ಸ ಪ್ರತಿಗಳನ್ನು ಸಾರ್ವಜನಿಕ ದೀಪ ಕಂಬ, ಮನೆಯ ಗೋಡೆ ಹಾಗೂ ಬಸ್ ನಿಲ್ದಾಣಗಳಲ್ಲಿ ಅಂಟಿಸಿರುತ್ತೇನೆ. ಅಕ್ಕಪಕ್ಕ ವಿಚಾರಿಸಲಾಗಿ ಅಲ್ಲಿ ಆರೋಪಿಗೆ ಯಾವುದೇ ಆಸ್ತಿಪಾಸ್ತಿ ಇರುವುದಿಲ್ಲ ಎಂದು ತಿಳಿಯಿತು. ಸದರಿ ವಿಷಯವನ್ನು ನಮ್ಮ ಮೇಲಾಧಿಕಾರಿಯವರಿಗೆ ತಿಸಿರುತ್ತೇನೆ.

**ಆರೋಪಿ ತಲೆಮರೆಸಿಕೊಂಡಿರುತ್ತಾನೆ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)**

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಂ.ಎಂ**